೩) ಈಗಾಗಲೇ ಇದರ ಬಗ್ಗೆ ಪರಿಶೀಲನೆ ನಡೆದಿದ್ದು ಆರ್ಥಿಕ ಕೊರತೆ ಇರುವ ಕಾರಣ ವಿಷಯವನ್ನು ಕೈಬಿಡಲಾಗಿದೆ.

ಡಾ॥ ಎನ್.ಬಿ. ನಂಜಪ್ಪ:– ಮಾನ್ಯ ಅಧ್ಯಕ್ಷರೇ, ತಾಲ್ಲೂಕಿಗೆ ಒಬ್ಬರಂತೆ ಸಹಾಯಕ ಶಿಕ್ಷಣಾಧಿಕಾರಿಗಳು ಇರುವುದು ನಿಜ. ಅವರು ಶಾಲೆಗಳಿಗೆ ಇನ್‌ಸ್ಪೆಕ್ಷನ್ ಮತ್ತೊಂದನ್ನೆಲ್ಲಾ ಮಾಡುವುದಕ್ಕೋಸ್ಕರ ವೆಹಿಕಲ್‌ನ್ನು ಕೊಟ್ಟರೆ ಮಾತ್ರ ಕೆಲಸ ಚೆನ್ನಾಗಿ ಆಗುತ್ತದೆಂದು ಹೇಳಿ ಪ್ರಶ್ನೆಯನ್ನು ಕೇಳಲಾಗಿದೆ. ತಾವು ಒಂದು ಜೀಪನ್ನು ಕೊಟ್ಟರೆ ವ್ಯವಸ್ಥಿತವಾಗಿ ಇನ್‌ಸ್ಪೆಕ್ಷನ್ ಎಲ್ಲ ನಡೆಸಿ ನೋಡಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ತಾವು ಏನೇನು ಕ್ರಮವನ್ನು ತೆಗೆದುಕೊಂಡಿರುತ್ತೀರಿ ಎನ್ನುವ ಬಗ್ಗೆ ನಾನು ಕೇಳುತ್ತಿದ್ದೇನೆ.

ಡಾ॥ ಹೆಚ್.ಡಿ. ಲಮಾಣಿ:– ಸನ್ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಸುಮಾರು 190 ಇಂಥ ತಾಲ್ಲೂಕ್ ಶಿಕ್ಷಣಾಧಿಕಾರಿಗಳು ಇದ್ದಾರೆ. ಒಬ್ಬ ಅಧಿಕಾರಿ ಸರ್ವೇಸಾಮಾನ್ಯವಾಗಿ ಸುಮಾರು 125 ಹಿರಿಯ ಪ್ರಾಥಮಿಕ ಶಾಲೆಗಳು, 90 ಪ್ರಾಥಮಿಕ ಶಾಲೆಗಳು, ಒಟ್ಟಿನಲ್ಲಿ ಬಹಳಷ್ಟು ಶಾಲೆಗಳನ್ನು ಇನ್‌ಸ್ಪೆಕ್ಷನ್ ಮಾಡುವಂಥ ಪರಿಸ್ಥಿತಿ ಇದೆ. ಅಷ್ಟೇ ಅಲ್ಲ, ಈ ನಾನ್‌ಟೀಚಿಂಗ್ ಸ್ಟಾಫ್ ಬಗ್ಗೆಯೂ ವೀಕ್ಷಣೆ ಮಾಡತಕ್ಕಂಥ ಒಂದು ಪರಿಸ್ಥಿತಿ ಇದೆ. ನಾನು ಸಹಿತ ಈ ಎ.ಇ.ಓ.ಗಳಿಗೆ ಒಂದು ವಾಹನವನ್ನು ಒದಗಿಸಬೇಕೆಂದು ಬಹಳಷ್ಟು ಕಾಳಜಿಯನ್ನು ವಹಿಸಿದ್ದೇನೆ. ಇಲ್ಲದಿದ್ದರೆ ಇನ್‌ಸ್ಪೆಕ್ಷನ್ ಮಾಡಲಿಕ್ಕೆ ಬಹಳ ಕಠಿಣವಾಗುತ್ತದೆ. ಇಷ್ಟೊಂದು ಶಾಲೆಗಳನ್ನು ಒಬ್ಬ ಎ.ಇ.ಓ. ಆಗಲೀ ಅಥವಾ ಇಬ್ಬರು ಇ.ಓ.ಗಳಾಗಲೀ ಅವರಿಗೆ ಇನ್‌ಸ್ಪೆಕ್ಟ್ ಮಾಡಲಿಕ್ಕೆ ಬಹಳ ತೊಂದರೆಯಾಗುತ್ತಿದೆ. ಅದಕ್ಕಾಗಿ ಒಂದು ಜೀಪನ್ನು ಕೊಡಿಸಬೇಕೆನ್ನುವಂಥ ಒಂದು ಪರಿಸ್ಥಿತಿಯಲ್ಲಿ ನಾವು ಈಗಾಗಲೇ ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಕೇಳಿದ್ದೆವು. ಆದರೆ ನಮಗೆ ಅದು ಸಾಧ್ಯವಾಗಲಿಲ್ಲ. ಈ ವಿಷಯವನ್ನು ಮತ್ತೊಮ್ಮೆ ಪರಿಶೀಲಿಸುತ್ತೇನೆ, ಮತ್ತು ಜೀಪ್‌ನ್ನು ಕೊಡಿಸುವಂಥ ಒಂದು ವ್ಯವಸ್ಥೆಯಲ್ಲಿ ನನ್ನ ಪ್ರಯತ್ನವೂ ಸಹಿತ ತಮ್ಮ ಜೊತೆಯಲ್ಲಿದೆ ಎಂದು ಅಧ್ಯಕ್ಷರ ಮೂಲಕ ಮಾನ್ಯಸದಸ್ಯರಿಗೆ ಹೇಳಬಯಸುತ್ತೇನೆ.

ಪಟ್ಟಣ ಪ್ರದೇಶಗಳಲ್ಲಿ ಹೆಚ್ಚುವರಿ ಶಾಲಾ ಕೊಠಡಿಗಳ ನಿರ್ಮಾಣ

409 (2116): ಹೆಚ್.ವೈ. ಮೇಟಿ (ಗುಳೇದಗುಡ್ಡ):–

ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) 1990-91, 1991-92, ಮತ್ತು 1992-93ನೇ ಸಾಲಿನಲ್ಲಿ ರಾಜ್ಯದ ನಗರ ಮತ್ತು ಪಟ್ಟಣ ಪ್ರದೇಶದಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಹೆಚ್ಚುವರಿ ಕೊಠಡಿಗಳನ್ನು ನಿರ್ಮಾಣ ಮಾಡುವುದಕ್ಕಾಗಿ ಸರ್ಕಾರವು ಹಣ ಬಿಡುಗಡೆ ಮಾಡಲಾಗಿದೆಯೇ; ಹಾಗಿದ್ದಲ್ಲಿ ಸರ್ಕಾರದ ಆದೇಶ ಪತ್ರದ ಪ್ರತಿಗಳನ್ನು ಲಗತ್ತಿಸುವುದು;

ಆ) ಆಯಾ ಸಾಲಿನಲ್ಲಿ ಈ ಶಾಲಾ ಕೊಠಡಿಗಳಿಗಾಗಿ ಶಿಕ್ಷಣ ಸಚಿವರಿಗೆ ವಿನಂತಿ ಪತ್ರಗಳನ್ನು ಸಲ್ಲಿಸಿದ್ದ ವಿಧಾನಸಭೆ ಮತ್ತು ವಿಧಾನಪರಿಷತ್ತಿನ ಸದಸ್ಯರು ಯಾರ್ಯಾರು, ಆ ವಿನಂತಿ ಪತ್ರದ ಪ್ರಕಾರ ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಇ) ಈ ಸಾಲಿನಲ್ಲಿ ಸರ್ಕಾರವು ಪ್ರಕಟಿಸಿರುವ ಆದೇಶ ಪತ್ರದಲ್ಲಿನ ಸ್ಥಳದ ಶಾಲೆಯ ಬದಲಿಗೆ ಬೇರೊಂದು ಶಾಲೆಯ ಕೊಠಡಿಗಳ ನಿರ್ಮಾಣಕ್ಕೆ ಹಣ ಹಸ್ತಾಂತರ ಮಾಡಬಹುದೆ, ಹಾಗಿದ್ದಲ್ಲಿ ಸರ್ಕಾರದ ಕ್ರಮವೇನು ?

ಡಾ।। ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):–

ಅ) 1990-91, 1991-92, 1992-93ನೇ ಸಾಲಿನಲ್ಲಿ ರಾಜ್ಯದ ನಗರ ಮತ್ತು ಪಟ್ಟಣ ಪ್ರದೇಶದ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕಾಗಿ ಹಣ ಬಿಡುಗಡೆಯಾಗಿದೆ. (ಸರ್ಕಾರಿ ಆದೇಶದ ಪ್ರತಿಗಳನ್ನು ಸಂಬಂಧಿಸಿದ ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು).

ಆ) ಆಯಾ ಕ್ಷೇತ್ರದ ಶಾಸಕರು, ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷರು, ನಾಗರೀಕರನ್ನೊಳಗೊಂಡಂತೆ ಶಾಲೆಗಳ ಕುಂದು ಕೊರತೆಗಳ ಸಮಿತಿಗಳಿಂದ ವಿನಂತಿಗಳು ಬಂದಿರುತ್ತವೆ. 1987ನೇ ಏಪ್ರಿಲ್ ಮಾಹೆಯಿಂದ ಜಿಲ್ಲಾ ಪರಿಷತ್ ಕಾರ್ಯಾಲಯಗಳ ಜವಾಬ್ದಾರಿಯಾಗಿರುವುದರಿಂದ ಸದರಿ ವಿನಂತಿ ಪತ್ರಗಳನ್ನು ಜಿಲ್ಲಾ ಪರಿಷತ್‌ಗಳಿಗೆ ಸಲ್ಲಿಸಿ ಆಯಾ ಜಿಲ್ಲೆಯ ಶಿಕ್ಷಣ ಉಪನಿರ್ದೇಶಕರು, ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿಯವರೊಂದಿಗೆ ವ್ಯವಹರಿಸಿ ಅವಶ್ಯವಿದ್ದೆಡೆ ಶಾಲಾ ಹೆಚ್ಚುವರಿ ಕೊಠಡಿಗಳನ್ನು ಪಟ್ಟಣಪ್ರದೇಶದಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ವ್ಯವಹರಿಸಿ ಈ ಜವಾಬ್ದಾರಿಯನ್ನು ನೋಡಿಕೊಳ್ಳಲು ವಿನಂತಿಸಲಾಗಿದೆ.

ಇ) ಇಲ್ಲ, ಆದರೆ ವಿಶೇಷ ಸಂದರ್ಭಗಳಲ್ಲಿ ಮಾತ್ರ ಸರ್ಕಾರದ ಅನುಮತಿ ಪಡೆದು ಬದಲಾವಣೆ ಮಾರ್ಪಾಡು ಮಾಡಿಕೊಳ್ಳಲು ಅವಕಾಶವಿದೆ.

ಶ್ರೀ ಹೆಚ್.ವೈ. ಮೇಟಿ:– ನಾನು 1990-91, 1991-92, 1992-93ನೇ ಸಾಲಿನಲ್ಲಿ ರಾಜ್ಯದ ನಗರ ಮತ್ತು ಪಟ್ಟಣ ಪ್ರದೇಶದ ಸರ್ಕಾರಿ ಪ್ರಾಥಮಿಕ ಶಾಲೆಗಳ ಹೆಚ್ಚುವರಿ ಕೊಠಡಿಗಳನ್ನು ನಿರ್ಮಾಣ ಮಾಡುವುದಕ್ಕಾಗಿ ಸರ್ಕಾರ ಹಣ ಬಿಡುಗಡೆ ಮಾಡಿದ ಬಗ್ಗೆ ಸರ್ಕಾರದ ಆದೇಶದ ಪ್ರತಿಗಳನ್ನು ಲಗತ್ತಿಸುವುದು ಎಂದು ಪ್ರಶ್ನೆ ಕೇಳಿದ್ದರೆ, ಪ್ರತಿಗಳನ್ನು ಸದಸ್ಯರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು ಎಂದು ಹೇಳಿದ್ದಾರೆ. ಈಗಲೇ ಕೊಡಬಹುದಲ್ಲ. ಅದೇ ರೀತಿ (ಆ) ಪ್ರಶ್ನೆಗೆ ಉತ್ತರವಾಗಿ ಶಹರದಲ್ಲಿ ಶಾಲಾ ಕಟ್ಟಡಗಳ ಬಗ್ಗೆ ಜಿಲ್ಲಾ ಪರಿಷತ್ತು ವಿಚಾರಣೆ ಮಾಡುತ್ತದೆಂದು ಹೇಳಿದ್ದಾರೆ. ಆದರೆ ನೇರವಾಗಿ ಅದು ಜಿಲ್ಲಾ ಪರಿಷತ್ತಿಗೆ ಸಂಬಂಧಪಡದಿರುವುದರಿಂದ ಈ ರೀತಿ ಉತ್ತರ ಹೇಳಿದ್ದು ಅಷ್ಟು ಸಮಂಜಸವಾಗುವುದಿಲ್ಲ. 3ನೇ ಪ್ರಶ್ನೆಗೆ ಉತ್ತರವಾಗಿ ಯಾವುದೇ ಶಾಲಾ ಕಟ್ಟಡಗಳನ್ನು ಬೇರೆ ಕಡೆಗೆ ವರ್ಗಾಯಿಸಬೇಕಾದರೆ ಸರ್ಕಾರದ ಅನುಮತಿ ಪಡೆದು ಬದಲಾಯಿಸುತ್ತೇವೆಂದು ಹೇಳಿದ್ದಾರೆ. ಆದರೆ ಲಿಂಗಸಗೂರು ತಾಲ್ಲೂಕಿನ ಮುದಗಲ್‌ನಲ್ಲಿ ಸರ್ಕಾರದ ಆದೇಶ ಇಲ್ಲದೆ ಬದಲಿ ಮಾಡಿದ್ದಾರೆ. ಅದಕ್ಕೆ ಯೋಗ್ಯ ಕ್ರಮ ತೆಗೆದುಕೊಳ್ಳುತ್ತೀರಾ ? ಅಲ್ಲಿ 5 ಕೋಣೆಗಳಿದ್ದು 4ನೇ ತರಗತಿಯವರೆಗೆ 147 ಮಕ್ಕಳಿದ್ದಾರೆ. ಅಲ್ಲಿ 5 ಕೋಣೆಗಳಿದ್ದರೂ 2 ಕೋಣೆಗಳನ್ನು ಬದಲಿ ಮಾಡಿ ಹೆಚ್ಚಿಗೆ ಕಟ್ಟಿದ್ದಾರೆ. ಆದರೆ ಮೇವಿನಪೇಟೆ ಎಂಬಲ್ಲಿ 3 ಕೊಠಡಿಗಳಿದ್ದು 5ನೇ ತರಗತಿಯವರೆಗೆ ಮಕ್ಕಳು ಓದುತ್ತಿದ್ದಾರೆ. ಅಲ್ಲಿದ್ದ 2 ಕೋಣೆಗಳನ್ನು ಬದಲಿ ಮಾಡಿ ಅಲ್ಲಿ ಹಾಕಿದ್ದಾರೆ. ಈ ಬಗ್ಗೆ ಯೋಗ್ಯಕ್ರಮ ತೆಗೆದುಕೊಳ್ಳಬೇಕೆಂದು ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಡಾ।। ಹೆಚ್.ಡಿ. ಲಮಾಣಿ:– ಸಾಮಾನ್ಯವಾಗಿ ಈ ರೀತಿ ಕಟ್ಟಡಗಳನ್ನು ವರ್ಗಾಯಿಸುವುದಕ್ಕಾಗುವುದಿಲ್ಲ. ಒಂದು ವೇಳೆ ಅವರು ಹೇಳಿದ ಪ್ರಕಾರ ಲಿಂಗಸುಗೂರಿನಲ್ಲಿ ಅಂಥದ್ದು ಏನಾದರೂ ಆಗಿದ್ದರೆ ಅದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಇದರಲ್ಲಿ ತಾವು ಕೊಟ್ಟಿಲ್ಲ; ತಾವು ಪ್ರತ್ಯೇಕವಾಗಿ ಬರೆದುಕೊಡಿ, ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಬೆಂಗಳೂರು ನಗರದಲ್ಲಿ ಮಕ್ಕಳ ಗ್ರಂಥಾಲಯದ ಕಟ್ಟಡ ನಿರ್ಮಾಣ

1828: ಶ್ರೀ ಆರ್. ದಯಾನಂದರಾವ್ (ಗಾಂಧಿನಗರ):–